ತೆರೆಯಲಾಗುವುದು. ಈ ಠಾಣೆಯನ್ನು ತೆರೆಯಲು ಈ ಕೆಳಗೆ ನಮೂದಿಸಿರುವ ವೆಚ್ಚ ತಗಲುತ್ತದೆ.

ಆವರ್ತಕ	ಅನಾವರ್ತಕ
ರೂ. 12,38,000	ರೂ. 1,45,00,000

ಬೆಂಗಳೂರು ನಗರ ನೀರು ಸರಬರಾಜು

3259 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬೆಂಗಳೂರು ನಗರ ತುಂಬಾ ಬೆಳೆಯುತ್ತಿದ್ದು ಅಸಮರ್ಪಕ ನೀರು ಸರಬರಾಜಿನಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ನೀರು ಸರಬರಾಜು ಉತ್ತಮಗೊಳಿಸಲು ಏನು ಕ್ರಮ ಕೈಗೊಳ್ಳಲಾಗಿದೆ?*

2. *ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಹೊಸದಾಗಿ ಕೆಳಮಟ್ಟದ ಜಲಾಶಯ (ಗ್ರೌಂಡ್ ಲೆವೆಲ್ ರಿಸರ್‌ವೈಯರ್) ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ? ಎಲ್ಲೆಲ್ಲಿ ಜಮೀನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ? ಎಷ್ಟು ವೆಚ್ಚದಲ್ಲಿ ಕಾಮಗಾರಿ ತೆಗೆದುಕೊಳ್ಳಲಾಗಿದೆ? ಯಾವ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ?*

3. *ಗುತ್ತಿಗೆ ಅಂತಿಮಗೊಳಿಸುವುದರಲ್ಲಿ ವಿಳಂಬವಾಗುತ್ತಿರುವುದು ನಿಜವೇ? ಹಾಗಿದ್ದಲ್ಲಿ ಕಾಮಗಾರಿ ಎಂದು ಪ್ರಾರಂಭಿಸಲಾಗುವುದು?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು)

1. ಬಂದಿದೆ. ನೀರು ಸರಬರಾಜು ಉತ್ತಮಗೊಳಿಸಲು ಬೆಂಗಳೂರು ಜಲ ಮಂಡಲಿ ಅಂದಾಜು 1072.00 ಕೋಟಿ ರೂ.ಗಳ ವೆಚ್ಚದಲ್ಲಿ ಕಾವೇರಿ 4ನೇ ಹಂತದ ಮೊದಲನೆಯ ಘಟ್ಟದ ಯೋಜನೆಯನ್ನು ತೆಗೆದುಕೊಂಡಿದ್ದು ಇದರಿಂದ ನಗರಕ್ಕೆ ದಿನಂಪ್ರತಿ 270 ದಶಲಕ್ಷ ಲೀಟರ್ ಹೆಚ್ಚುವರಿ ನೀರು ಬರಲಿದೆ. ಈ ಯೋಜನೆ ಮಾರ್ಚ್ 2002ದ ವೇಳೆಗೆ ಕಾರ್ಯಗತವಾಗುವ ನಿರೀಕ್ಷೆಯಿದೆ.

2. ಬೆಂಗಳೂರು ನಗರದಲ್ಲಿ ಆರು ಜಲಾಗಾರಗಳನ್ನು, ಅಂದರೆ, ಹೆಗ್ಗನಹಳ್ಳಿ, ಸಿಂಗಾಪುರ, ಜಿ.ಕೆ.ವಿ.ಕೆ., ಕೊತ್ತನೂರು ದಿಣ್ಣೆ, ಕೋಡಿ ಚಿಕ್ಕನಹಳ್ಳಿ, ಹೂಡಿಗಳಲ್ಲಿ ನಿರ್ಮಾಣ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ಮೇಲೆ ತಿಳಿಸಿರುವ ಎಲ್ಲಾ ಸ್ಥಳಗಳಲ್ಲಿ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಕಾಮಗಾರಿಗಳನ್ನು ಅಂದಾಜು ರೂ. 41.74 ಕೋಟಿ ವೆಚ್ಚದಲ್ಲಿ ತೆಗೆದುಕೊಳ್ಳಲಾಗಿದ್ದು, ಈ ಕಾಮಗಾರಿಗಳನ್ನು ಮೆ : ಪೆಟ್ರಾನ್ ಸಿವಿಲ್ ಇಂಜಿನಿಯರಿಂಗ್ ವರ್ಕ್ಸ್ ಮತ್ತು ಎಲ್ ಅಂಡ್ ಟಿ ಸಂಸ್ಥೆಗಳಿಗೆ ಗುತ್ತಿಗೆ ಮೇರೆಗೆ ನೀಡಲಾಗಿದೆ.

3. ಇಲ್ಲ. ಎಲ್ಲಾ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

ಶ್ರೀ ಎಚ್.ಕೆ. ಪಾಟೀಲ್ (ಭಾರೀ ನೀರಾವರಿ ಸಚಿವರು) : ಅಧ್ಯಕ್ಷರೇ, ಮೂವತ್ತೊಂದನೇ ಪಟ್ಟಿಯ ಒಟ್ಟು 153 ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪೈಕಿ 76 ಉತ್ತರಗಳ ಪಟ್ಟಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಬೆಂಗಳೂರು ನಗರದಲ್ಲಿ ಕಂದಾಯ ಪರಿಷ್ಕರಣೆಯಲ್ಲಿ ಅನಗತ್ಯ ಕಿರುಕುಳ

3260 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯನ್ನು ಅಳವಡಿಸಿಕೊಳ್ಳದೇ ಇರುವವರ ಆಸ್ತಿ ತೆರಿಗೆ ನಿಗದಿಪಡಿಸುವ ಸಾಮಾನ್ಯ ಕಂದಾಯ ಪರಿಷ್ಕರಣೆ ಹೆಸರಿನಲ್ಲಿ ಪಾಲಿಕೆಯ ಕಂದಾಯ ಅಧಿಕಾರಿಗಳು ಅನಗತ್ಯ ಕಿರುಕುಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಪರಿಷ್ಕರಣೆ ಕಾರ್ಯದಲ್ಲಿ ಪಾಲಿಕೆ ಸಿಬ್ಬಂದಿಯಿಂದ ನಾಗರೀಕರಿಗೆ ಕಿರುಕುಳ ಆಗಿದ್ದು ಪರಿಷ್ಕರಣೆ ನೆಪದಲ್ಲಿ ಹೆಚ್ಚು ತೆರಿಗೆ ದರಗಳನ್ನು ವಿಧಿಸುತ್ತಿರುವುದು ನಂತರ ಲಂಚ ಪಡೆದು ಕಡಿಮೆ ತೆರಿಗೆ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯಿಂದ ಪಾಲಿಕೆಗೆ ಸಂಗ್ರಹವಾಗಿರುವ ಮೊತ್ತವೆಷ್ಟು? ಪಾಲಿಕೆಗೆ ಇನ್ನೂ ಸಂಗ್ರಹವಾಗಬೇಕಾಗಿರುವ ಕಂದಾಯದ ಮೊತ್ತವೆಷ್ಟು?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :

ಅ) ಇಲ್ಲ.

ಆ) ಇಲ್ಲ.

ಇ) ಸಂಗ್ರಹವಾಗಿರುವ ಮೊತ್ತ ರೂ. 72,64,93,011.00 ಸಂಗ್ರಹವಾಗಬೇಕಿರುವ ಮೊತ್ತ ರೂ. 80 ಕೋಟಿಗಳು.

ಬೆಂಗಳೂರು ನಗರದಲ್ಲಿ ಆಗಿರುವ ಕ್ರೈಂ ಮಾಹಿತಿ

3261 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ಸೆಪ್ಟೆಂಬರ್ 1999ರಿಂದ ಅಕ್ಟೋಬರ್ 2000ದ ವರೆಗೆ (ಅಂದರೆ ದಿನಾಂಕ 23.10.2000) ರವರೆಗೆ ಸಂಭವಿಸಿದ ವಿವಿಧ ಬಗೆಯ ಅಪರಾಧಗಳ ಸಂಖ್ಯೆ ಎಷ್ಟು?*